**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 356/2022**

ಪಿಡಬ್ಲ್ಯೂ: 01

ಸಿಡಬ್ಲ್ಯೂ: 01

ಹೆಸರು : ಪೂಜಾ ನಾಗರಾಜ ಬಡಿಗೇರ

ವಯಸ್ಸು : 35 ವರ್ಷ

ಉದ್ಯೋಗ : ಮನೆಗೆಲಸ

ವಾಸಸ್ಥಳ : ಅಂಗರಗಟ್ಟಿ

ದಿನಾಂಕ : 18.07.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ಚಾಸಾ–07 ನನ್ನ ಗಂಡ, ಚಾಸಾ–04 ನನ್ನ ಅತ್ತೆ, ಚಾಸಾ–05 ನನ್ನ ಮಾವ, ಚಾಸಾ–05 ನನ್ನ ಮೈದುನ. ದಿನಾಂಕಃ 26.01.2022 ರಂದು ಬೆಳಿಗ್ಗೆ 9.30 ರಿಂದ 10.00 ಘಂಟೆಯವರೆಗೆ ನಮ್ಮ ಮನೆಯ ಹತ್ತಿರ ಹಿಂದುಗಡೆ ಜಾಗಳ ಆಗಿರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಜಗಳ ಆಗಿರುತ್ತದೆ. ನನ್ನ ಮೈದುನ ಪಾಯಖಾನೆ ಗುಂಡಿ ತೊಡುತ್ತಿದ್ದಾಗ ಅವನ ಜೂತೆಗೆ ಚಾಸಾ–05 ರವರು ಹಾಜರಿದ್ದರು. ಆರೋಪಿತರೆಲ್ಲರೂ ಜಾಗೆಗೆ ಬಂದು ಗುಂಡಿ ತೊಡಬೇಡಿರಿ ನಮ್ಮ ಜಾಗೆ ಇದೆ ಅಂತಾ ಅವಾಚ ಶಬ್ದಗಳಿಂದ ಬೈದರು. ನಾವು ಮನೆಯ ಒಳಗಡೆಯಿಂದ ಹೊರಗೆ ಬಂದಿರುತ್ತೇನೆ. ನಾನು ಮತ್ತು ನನ್ನ ಅತ್ತೆ, ಚಾಸಾ–04 ಮತ್ತು 07 ಬಂದಿರುತ್ತೇವೆ. ನಾವು ಏಕೆ ಜಗಳ ಮಾಡುತ್ತಿದ್ದಿರಾ ಅಂತಾ ಕೇಳಿದಾಗ ಏ ಮಿಂಡ್ರಿಯರ ಅಂತಾ ಅವಾಚ್ಯವಾಗಿ ಬೈದು ನಮ್ಮ ಮೈದುನನ್ನ ಗುದ್ದಲಿಯನ್ನು ನಾಗಪ್ಪ ಕಸಿದುಕೊಂಡು ನಮ್ಮ ಮಾವನಿಗೆ ಹೊಡೆಯಲು ಬಂದಾಗ ಮೈದುನ ಎಳೆದುಕೊಂಡನು. ಆಗ ಮಾವನಿಗೆ ಬಿಳುವ ಪೆಟ್ಟು 5 ನೆ

ಆರೋಪಿ ಈರಪ್ಪನಿಗೆ ಹೊಡೆತ ಬಿದ್ದಿರುತ್ತದೆ. 5 ನೇ ಆರೋಪಿ ಈರಪ್ಪನಿಗೆ ತಲೆಗೆ ಹೊಡೆತ ಬಿದ್ದಿರುತ್ತದೆ. ನಾವು 5 ನೇ ಆರೋಪಿತನನ್ನು ಹೊಡತ ಬಿದ್ದಮೇಲೆ ಎಬ್ಬಿಸಲು ಹೋದಾಗ ನಮ್ಮ ಅತ್ತೆಯ ಸೀರೆ ಹಿಡಿದು ದೂಡಾಡಿ ನನ್ನನ್ನು ಅದೇ ತರಹ ಮಾಡಿರುತ್ತಾರೆ. ನನ್ನನ್ನು ಸೀರೆ ಹಿಡಿದು, ಕೂದಲು ಹಿಡಿದು ಎಳೆದಾಡಿರುತ್ತಾರೆ. ನಮಗೆ ಜೀವದ ಬೆದರಿಕೆ ಹಾಕಿರುತ್ತಾರೆ. ಮಂಜುನಾಥ ಮತ್ತು ನಮ್ಮ ಮಾವನಿಗೆ ಕಲ್ಲಿನಿಂದ ಹೊಡೆದಿರುತ್ತಾರೆ. ನಾಗರಾಜ ಈತನಿಗೆ ಕಲ್ಲಿನಿಂದ ಹೊಡೆದಿರುತ್ತಾರೆ. ಜಗಳವನ್ನು ಚಾಸಾ–8 ಮತ್ತು 9 ರವರು ಬಿಡಿಸಿರುತ್ತಾರೆ. ನಾವು ಆಸ್ಪತ್ರೆಯಿಂದ ಬಂದು ನೋಡಿಕೊಳ್ಳುತ್ತೇವೆ ಅಂತಾ ಆಸ್ಪತ್ರೆಗೆ ಹೋಗಿರುತ್ತಾರೆ. ನನ್ನ ಅತ್ತೆ, ಮೈದುನರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಜಾಗೆಯ ಸಲುವಾಗಿ ಮನೆ ಕಟ್ಟುವ ಸಲುವಾಗಿ ಜಗಳಗಳು ಆಗಿರುತ್ತವೆ. ಸದರಿ ಜಗಳವನ್ನು ತಾಲೂಕಾ ಆಫೀಸಿನವರು ಬಂದು ಅಳತೆ ಮಾಡಿ ಹದ ಬಸ್ತ ಮಾಡಿ ಬಗೆಹರಿಸಿರುತ್ತಾರೆ. ನಂತರ ನಾವು ಪೊಲೀಸಠಾಣೆಗೆ ಬಂದು ದೂರನ್ನು ಸಲ್ಲಿಸಿರುತ್ತೇವೆ. ದೂರನ್ನು ನನ್ನ ಗಂಡ ಚಾಸಾ–07 ಬರೆದಿರುತ್ತಾರೆ. ದೂರನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಂತರ ನ್ಯಾಯಾಲಯಕ್ಕೆ ಬಂದು ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯನ್ನು ನಿಪಿ–02 ಎಂದು, ಸಾಕ್ಷಿ ಸಹಿಯನ್ನು ನಿಪಿ–02(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಗುದ್ದಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ 01 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ** :

ನಮ್ಮ ಮನೆಯ ಆಸ್ತಿ ನಂಬರ ನನಗೆ ಹೇಳಲು ಬರುವುದಿಲ್ಲಾ. ಸದರಿ ಮನೆ ನಮ್ಮ ಅತ್ತೆಯ ಹೆಸರಿಗೆ ಇರುತ್ತದೆ. ಸದರಿ ಆಸ್ತಿ ಸರ್ಕಾರದವರು ನೀಡಿರುತ್ತಾರೆ. ಸದರಿ ಆಸ್ತಿಯ ಕ್ಷೇತ್ರ ಎಷ್ಟು

ಅಂತಾ ಹೇಳಲು ಬರುವುದಿಲ್ಲಾ. ಸದರಿ ಆಸ್ತಿ ಉತ್ತರ–ದಕ್ಷಿಣ 30 ಪೂಟ, ಪೂರ್ವ–ಪಶ್ಚಿಮ 40 ಪೂಟ ಇದೆ ಎಂದರೆ ಸರಿಯಲ್ಲಾ. ನಮ್ಮ ಬಿಲ್ಡಿಂಗ ಕ್ಷೇತ್ರ ನನಗೆ ಗೊತ್ತಿಲ್ಲಾ. ಉತ್ತರ–ದಕ್ಷಿಣ 32 ಪೂಟ, ಪೂರ್ವ–ಪಶ್ಚಿಮ 35 ಪೂಟ ನಮ್ಮ ಬಿಲ್ಡಿಂಗ ಇದೆ ಎಂದರೆ ಸರಿ. ನಮ್ಮ ಮನೆಯ ದಕ್ಷಿಣದ ದಿಕ್ಕಿಗೆ ಆರೋಪಿತರ ಆಸ್ತಿ ಇದೆ ಎಂದರೆ ಸರಿ. ನಾವು ಆರೋಪಿತರ 2 ಪೂಟ ಆಸ್ತಿಯನ್ನು ಒತ್ತೂವರಿ ಮಾಡಿ ಮನೆ ಕಟ್ಟಿದ್ದೇವೆ ಅಂದರೆ ಸರಿಯಲ್ಲಾ. ನಾನು ಆರೋಪಿತರ ಜಾಗೆ ಒತ್ತೂವರಿ ಮಾಡಿಲ್ಲಾ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ನಮ್ಮ ಮನೆಯ ಪಕ್ಕ ಆರೋಪಿತರ ಮನೆಯ ಪಕ್ಕದಲ್ಲಿ ಪೂರ್ವ–ಪಶ್ಚಿಮದ ಮಾಲೀಕರು ಯಾವುದೇ ಜಗಳ ಮಾಡಿಲ್ಲಾ ಅಂದರೆ ಸರಿ. ಆರೋಪಿತರು ನಾವು ಮನೆ ಕಟ್ಟುವಾಗ 2 ಪೂಟ ಒತ್ತುವರಿ ಮಾಡಿ ಮನೆ ಕಟ್ಟುತ್ತಿದ್ದಿರಿ ಕಟ್ಟಬೇಡಿರಿ ಅಂತಾ ಹೇಳಿದರೂ ಸಹ ಮನೆ ಕಟ್ಟಿ ಕಿಟಕಿ ಇಟ್ಟಿದ್ದೇವೆ ಅಂದರೆ ಸರಿಯಲ್ಲಾ. ಆರೋಪಿತರ ಆಸ್ತಿಯಲ್ಲಿ ಅತೀಕ್ರಮ ಪ್ರವೇಶ ಮಾಡಿ ಪಾಯಖಾನೆ ಗುಂಡಿ ಕಡೆಯಲು ನನ್ನ ಮಾವ ಮತ್ತು ಮೈದುನ ಹೋಗಿದ್ದರು ಎಂದರೆ ಸಾಕ್ಷಿಯು ಪಾಯಖಾನೆ ಗುಂಡಿ ತೋಡುತ್ತಿದ್ದರು ಆದರೆ ಅತೀಕ್ರಮ ಮಾಡಿಲ್ಲಾ ಅಂತಾ ಹೇಳುತ್ತಾರೆ. ನಾವು ಆರೋಪಿತರಿಗೆ ಪಾಯಖಾನೆ ಗುಂಡಿ ಕಟ್ಟುವವರು ಅಂತಾ ಅವಾಚ್ಯಶಬ್ದ ಬೈದಿರುತ್ತೇವೆ ಅಂದರೆ ಸರಿಯಲ್ಲಾ. ನಮ್ಮ ಮಾವ 5 ನೇ ಆರೋಪಿ ಈತನಿಗೆ ಗುದ್ದಲಿಗೆ ಹೊಡೆದರು ಅಂದರೆ ಸರಿಯಲ್ಲಾ. ನಾವು ಸಹ ಆರೋಪಿತರನ್ನು ಹೊಡೆ ಬಡೆ ಮಾಡಿರುತ್ತೇವೆ ಅಂದರೆ ಸರಿ. ಆರೋಪಿತರು ದೂರನ್ನು ಕೊಟ್ಟ ವಿಷಯ ತಿಳಿದು ನಂತರ ನಾವು ದೂರನ್ನು ಕೊಟ್ಟಿದ್ದೇವೆ ಅಂದರೆ ಸರಿ. ಆರೋಪಿತರು ನಮ್ಮನ್ನು ಹೊಡೆದಿದ್ದರೆ ನಾವೇ ಮೊದಲು ದೂರನ್ನು ಕೊಡುತ್ತಿದ್ದೇವು ಅಂದರೆ ಸರಿ. ಘಟನೆ ಆರೋಪಿತರ ಜಾಗೆಯಲ್ಲಿ ಆಗಿರುತ್ತದೆ. ನಾವೇ ಆರೋಪಿತರ ಜಾಗೆಯಲ್ಲಿ ಹೋಗಿರುತ್ತೇವೆ ಅಂದರೆ ಸರಿಯಲ್ಲಾ. ಆರೋಪಿತರಿಗೆ ಹೊಡೆ ಬಡೆ ಮಾಡಿ, ಅವಾಚ್ಯಶಬ್ದಗಳಿಂದ

ಬೈದು ಜೀವ ಬೆದರಿಕೆ ಹಾಕಿ ಖೊಟ್ಟಿ ದೂರನ್ನು ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲಾ. ಸದರಿ ಘಟನೆ 9.00 ರಿಂದ 10.00 ಘಂಟೆಯವರೆಗೆ ಆಗಿರುತ್ತದೆ. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲಾ. 12.30 ರಿಂದ 1.00 ಘಂಟೆಗೆ ನನ್ನ ಗಂಡ, ಮೈದುನ ಮತ್ತು ಮಾವ ಆಸ್ಪತ್ರೆಗೆ ಹೋಗಿರುತ್ತಾರೆ. ಸದರಿಯವರಿಗೆ ಯಾವುದೇ ಗಾಯ ಆಗದೇ ಇದ್ದರೂ ಸಹ ಆರೋಪಿತರು ದೂರನ್ನು ಕೊಟ್ಟಿದ್ದರಿಂದ ಆಸ್ಪತ್ರೆಗೆ ಹೋಗಿರುತ್ತಾರೆ ಅಂದರೆ ಸರಿಯಲ್ಲಾ. ನಾನು 7 ನೇ ತರಗತಿ ಕಲಿತಿರುತ್ತೇನೆ. ನನಗೆ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಿಪಿ–01 ರಲ್ಲಿ ಏನು ಬರೆದಿದೆ ಅಂತಾ ನನಗೆ ಸ್ವಂತಕ್ಕೆ ಮಾಹಿತಿ ಇಲ್ಲಾ ಅಂದರೆ ಸರಿಯಲ್ಲಾ. ನಿಪಿ–01 ರಲ್ಲಿ ನನ್ನ ಸಹಿ ಬಿಟ್ಟು ಏನು ಬರೆದಿದೆ ಅಂತಾ ನನಗೆ ಮಾಹಿತಿ ಇಲ್ಲಾ ಅಂದರೆ ಸರಿಯಲ್ಲಾ. ನನ್ನ ಗಂಡ ಆಸ್ಪತ್ರೆಯಿಂದ 3.00 ಘಂಟೆಗೆ ಮನೆಗೆ ಬಂದಿರುತ್ತಾರೆ ನಂತರ ನಾನು ದೂರನ್ನು ನೀಡಿಲು ಪೊಲೀಸಠಾಣೆಗೆ ನಾನು ಮತ್ತು ನನ್ನ ಗಂಡ ಸಂಜೆ 5.00 ರಿಂದ 6.00 ಘಂಟೆಗೆ ಬಂದಿರುತ್ತೇವೆ. ನಿಪಿ–01 ನ್ನು ಪೊಲೀಸಠಾಣೆಯಲ್ಲಿ ಬರೆದಿರುತ್ತಾರೆ. ಪೊಲೀಸರು ದೂರನ್ನು ತೆಗೆದುಕೊಳ್ಳಲು ಮಾತ್ರ ಇರುತ್ತಾರೆ ಬರೆಯಲು ಅವಕಾಶ ಕೊಡುವುದಿಲ್ಲಾ ಅಂದರೆ ಸರಿಯಲ್ಲಾ. ಯಾವುದೇ ಘಟನೆ ಆಗದೆ ಇದ್ದರೂ ಸಹ ಆರೋಪಿತರು ದೂರನ್ನು ಕೊಟ್ಟಿದ್ದರಿಂದ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ಸಂಜೆ 8.00 ಘಂಟೆಯವರೆ ಪೊಲೀಸಠಾಣೆಯಲ್ಲಿ ಇದ್ದೇವು. ನಾನು ನಿಪಿ–01 ನ್ನು ನೀಡಿದಾಗ 8.00 ಘಂಟೆ ಆಗಿರುತ್ತದೆ. ನಾನು ಪೊಲೀಸಠಾಣೆಗೆ ಹೋಗಿಲ್ಲಾ, ನಿಪಿ–01 ನ್ನು ನೀಡಿಲ್ಲಾ ಅಂದರೆ ಸರಿಯಲ್ಲಾ. ನನ್ನ ಮಾವ 5 ನೇ ಆರೋಪಿತನಿಗೆ ಹೊಡೆದಿದ್ದರಿಂದ ನಮಗೆ ಶಿಕ್ಷೆ ಆಗುತ್ತದೆ ಅಂತಾ ಈ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ಘಟನಾ ಕಾಲಕ್ಕೆ ಸಮಾರು 10 ರಿಂದ 15 ಜನ ಇದ್ದರು. ಎಲ್ಲರ ಹೆಸರು ನನಗೆ ಹೇಳಲು ಆಗುವುದಿಲ್ಲಾ. ಆರೋಪಿತರು ಘಟನಾ ಸ್ಥಳದಲ್ಲಿ ನಮಗೆ ಯಾವುದೇ ಹಲ್ಲೆ

ಮಾಡಿಲ್ಲಾ ಅಂದರೆ ಸರಿಯಲ್ಲಾ. ಮುಮಾ 01 ರಿಂದ ನಮಗೆ ಯಾವುದೇ ಹೊಡೆತ ಬಿದ್ದಿರುವುದಿಲ್ಲಾ ಆದರೆ ಕಲ್ಲಿನಿಂದ ಹೊಡೆತ ಬಿದ್ದಿರುತ್ತದೆ. ಪೊಲೀಸರಿಗೆ ಸದರಿ ಕಲ್ಲನ್ನು ಕೊಟ್ಟಿರುವುದಿಲ್ಲಾ. ಆರೋಪಿತರು ಕಲ್ಲಿನಿಂದ ಹೊಡೆಯದೆ ಇರುವುದರಿಂದ ನಾವು ಕಲ್ಲನ್ನು ಕೊಟ್ಟಿಲ್ಲಾ ಅಂದರೆ ಸರಿಯಲ್ಲಾ. ಆರೋಪಿತರು ಸೀರೆ ಹಿಡಿದು ಎಳೆದಾಡಿದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಆರೋಪಿತರು ನನ್ನ ತಲೆಯ ಕೂದಲು ಹಿಡಿದು ಎಳೆದಾಡಿದರು ಅಂತಾ ನಾನು ಆಸ್ಪತ್ರೆಗೆ ದಾಖಲು ಆಗಿರುವುದಿಲ್ಲಾ. ನನ್ನ ಕೂದಲು ಹಿಡಿದು ಎಳೆದಾಡಿಲ್ಲಾ ಆದ್ದರಿಂದ ನಾನು ಆಸ್ಪತ್ರೆಗೆ ದಾಖಲಾಗಿಲ್ಲಾ ಅಂದರೆ ಸರಿಯಲ್ಲಾ. ಆರೋಪಿತರು ನನಗೆ ಜೀವದ ಬೆದರಿಕೆ ಹಾಕಿರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ನಾನು ಹೇಳುವುದು ಎಲ್ಲಾ ಸುಳ್ಳು ಇದೆ ಎಂದು ಹೇಳುತ್ತಾರೆ. ಆರೋಪಿತರಿಗೆ ನಾವು ಹೊಡೆ ಬಡೆ ಮಾಡಿದ್ದರಿಂದ ನಾವು ಆ ಪ್ರಕರಣದಿಂದ ಹೊರಗೆ ಬರಲು ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.